**ಸಿ.ಸಿ.ನಂಃ 5862 / 2024 ಪಿ ಡಬ್ಲೂಃ 1**

**ದಿನಾಂಕಃ 14-08-2026 ರಂದು ಸಾಕ್ಷಿಯನ್ನು ಕೂಗಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ ಆರ್ ಯು ವಕೀಲರಿಂದ :**

ಆರೋಪಿಯು ಕಳೆದ 7 ವರ್ಷಗಳಿಂದ ನನಗೆ ಪರಿಚಯ ಇರುತ್ತಾರೆ. 2020 ರಲ್ಲಿ ಸ್ವಲ್ಪ ದಿನಗಳ ಕಾಲ ನಾನು ಆರೋಪಿಯು ನಡೆಸುತ್ತಿದ್ದ ಗಾರ್ಮೆಂಟ್ಸ್ ನಲ್ಲಿ ಟೈಲರ್ ಆಗಿ ಕೆಲಸ ಮಾಡುತ್ತಿದ್ದೆ. 2023 ಜನೇವರಿ ಮೊದಲನೇ ವಾರದಲ್ಲಿ ಆರೋಪಿಯು ನಮ್ಮ ಮನೆಗೆ ಬಂದು ರೂ 5 ಲಕ್ಷ ಸಾಲವನ್ನು ಕೇಳಿರುತ್ತಾರೆ. ನಾನು ಆರೋಪಿಯ ಗಾರ್ಮೆಂಟ್ಸ್ ಟೈಲರ್ ಆಗಿ ಕೆಲಸ ಮಾಡುವ ಪೂರ್ವದಲ್ಲಿ ಆರೋಪಿ ನನಗೆ ಪರಿಚಯ ಇರುತ್ತಾರೆ ಕಾರಣ ನಾನು ಟೈಲರ್ ಗಳನ್ನು ಆರೋಪಿಗೆಯ ಗಾರ್ಮೆಂಟ್ಸ್ ಗೆ ಕೆಲಸಕ್ಕಾಗಿ ಕಳಿಸುತ್ತಿದ್ದೆ. ಆರೋಪಿಯ ಗಾರ್ಮೆಂಟ್ಸ್ ಗೆ 3 ಜನ ಟೈಲರ್ ಗಳನ್ನು ಕೆಲಸಕ್ಕಾಗಿ ಕಳಿಸಿರುತ್ತೇನೆ ಅವರ ಹೆಸರು ಈಗ ನನಗೆ ಹೇಳಲಾಗುವುದಿಲ್ಲ.

ನಾಗರತ್ನ ಎನ್ನುವವರು ನನಗೆ ಪರಿಚಯ ಇರುತ್ತಾರೆ. ಅವರು ಕೂಡಾ ಟೈಲರ್ ಆಗಿ ಕೆಲಸ ಮಾಡುತ್ತಿದ್ದಾರೆ. ರೂ 5 ಲಕ್ಷ ಹಣವನ್ನು ನಾನು ನಗದು

ಮುಖಾಂತರ ಆರೋಪಿಗೆ ನನ್ನ ಗಂಡ ಹಾಗೂ ಅವರ ಸ್ನೇಹಿತ ಬಸವರಾಜು ರವರ ಸಮ್ಮುಖದಲ್ಲಿ ಕೊಟ್ಟಿರುತ್ತೇನೆ. ಆರೋಪಿಯು ತನ್ನ ಗಾರ್ಮೆಂಟ್ಸ್ ಬಿಸಿನೆಸ್ ಅಭಿವೃದ್ಧಿ ಪಡಿಸಿಕೊಳ್ಳಲು ಹಣ ಪಡೆದುಕೊಂಡಿರುತ್ತಾರೆ. ನಾನು ಸದರಿ ಗಾರ್ಮೆಂಟ್ಸ್ ನ್ನು ಹೋಗಿ ನೋಡಿರುತ್ತೇನೆ. ಪ್ರಸ್ತುತ ಸದರಿ ಗಾರ್ಮೆಂಟ್ಸ್ ಚಾಲ್ತಿಯಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಅಲ್ಲದೇ ಆರೋಪಿಯ ಗಾರ್ಮೆಂಟ್ಸ್ ಯಾವಾಗ ಕ್ಲೋಸ್ ಆಯಿತು ಎಂಬುವುದು ಕೂಡಾ ನನಗೆ ಗೊತ್ತಿರುವುದಿಲ್ಲ.

ದಿಃ 21.01.2021 ರಂದು ಆರೋಪಿಯ ಗಾರ್ಮೆಂಟ್ಸ್ ಫ್ಯಾಕ್ಟರಿ ಲಾಕೌಟ್ ಆಗಿ ಕ್ಲೋಸ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ ಆದರೆ ನಾನು ಹೋಗಿದ್ದಾಗ ಗಾರ್ಮೆಂಟ್ಸ್ ಫ್ಯಾಕ್ಟರಿಯನ್ನು ಆರೋಪಿಯು ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಆರೋಪಿಗೆಯ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಟೈಲರ್ ಆಗಿ ಸ್ವಲ್ಪ ದಿನಗಳ ಕಾಲದ ಕೆಲಸ ಮಾಡಿದ್ದೇನೆ ಎಂದು ತೋರಿಸುವ ಸಂಬಂದ ಯಾವುದೇ ದಾಖಲೆ ನನ್ನಲ್ಲಿ ಇರುವುದಿಲ್ಲ. ನಾನು ಟೈಲರ್ ಆಗಿ ಆರೋಪಿಯ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

ಆರೋಪಿ ಖುದ್ದಾಗಿ ನನ್ನನ್ನು ಎಂದೂ ಕೂಡಾ ಸಾಲಕ್ಕಾಗಿ ಭೇಟಿಯಾಗಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಾಗರತ್ನ ರವರ ಮುಖಾಂತರ ಆರೋಪಿಯು ನನ್ನನ್ನು ರೂ 2 ಲಕ್ಷ ಹಣದ ಸಾಲಕ್ಕಾಗಿ 2021 ರಲ್ಲಿ ಭೇಟಿ ಮಾಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ನಾಗರತ್ನ ಮತ್ತು ನನ್ನ ಮದ್ಯ ಬೇರೆ ಬೇರೆ ವ್ಯವಹಾರಗಳು ಇರುತ್ತದೆ ಅದಕ್ಕೂ ಮತ್ತು ಈ ಪ್ರಕರಣದ ವ್ಯವಹಾರಕ್ಕೂ ಯಾವುದೇ ಸಂಬಂದ ಇಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಿ ಮುಂದೂಡಲಾಯಿತು)**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**22 ನೇ ಅಪರ ಮು. ಮ. ದಂ.,**

**ಬೆಂಗಳೂರು ನಗರ.**